
# ಪುಸ್ತಕ ಪರಾಗ

**ಪದ್ಮನಾಭ ಭಟ್**

## ಅವನ ಮುಖ ಮರೆತುಹೋಗಿದೆ



ಆಧುನಿಕ ಕನ್ನಡ ಕಾವ್ಯಲೋಕದಲ್ಲಿ ಮರೆತೇ ಹೋಗದಂಥ ಮೊಹರು ಮೂಡಿಸಿದ ಪ್ರತಿಭಾ ನಂದಕುಮಾರ್ ಅವರ ಹದಿಮೂರನೇ ಕಾವ್ಯಗುಚ್ಛ 'ಅವನ ಮುಖ ಮರೆತುಹೋಗಿದೆ'. ಕಗ್ಗತ್ತಲಲ್ಲಿ ನಿಗಿನಿಗಿ ಕೆಂಡದುಂಡೆಗಳು ಹೊಮ್ಮಿಸುವ ಬೆಳಕನ್ನೂ ಸುಡುಸುಡುತನವನ್ನೂ ಕಾವ್ಯದಲ್ಲಿ ಒಟ್ಟೊಟ್ಟಿಗೇ ಕೊಟ್ಟು ಬೆಚ್ಚಿಬೀಳಿಸಿದವರು ಮತ್ತು ಬೆಚ್ಚಗಾಗಿಸಿದವರು ಪ್ರತಿಭಾ. ಎದೆನಡುಗಿಸುವ ಧ್ವನಿಯಲ್ಲಿ ಗುಡುಗಿದಾಗಲೂ, ಎದೆಗೆ ನಾಟುವ ಹಾಗೆ ಸ್ಟೇಟ್‌ಮೆಂಟ್‌ಗಳನ್ನು ಬೀಸಿದಾಗಲೂ ಅವೆಲ್ಲವನ್ನೂ ಕಾವ್ಯವೂ ಆಗಿ ಉಳಿಯುವ ಹಾಗೆ ಬೆಳೆಸುವ, ಬೆಳಗುವ ಕಲೆ ಗೊತ್ತಿರುವ ಅಪರೂಪದ ಕವಿ ಅವರು. ಅವರ ಆ ಉಜ್ವಲ ಪ್ರತಿಭೆ ಇಲ್ಲಿನ ಕವಿತೆಗಳಲ್ಲಿ ತುಸುವೇ ಮಂಕಾದಂತೆ ಭಾಸವಾಗುವುದಕ್ಕೆ ಸದ್ಯದ ಕಾಲವೂ ಕಾರಣವಿರಬಹುದು.

'ನಾನೊಪ್ಪುವುದಿಲ್ಲ. ಹಸಿವಾದಾಗ ಉಣ್ಣುವ ವ್ರತವಿದೆ ನನಗೆ / ಬಾ ಬಡಿಸೆಂದು ಕೇಳುವವಳೇ ನಾನು, ಇಲ್ಲವೆನ್ನಬಾರದು ನೀನು' (ಕಾವಿನ ಕವನಗಳು), 'ಅಂದಿನ ಉನ್ಮಾದ ನೆನಪಿದೆ. ಅವನ ಮುಖ ಮರೆತುಹೋಗಿದೆ' (ಅವನ ಮುಖ ಮರೆತುಹೋಗಿದೆ!) – ಇಂಥ ಮನಕಚ್ಚಿ ಕೂಡುವ ಸಾಲುಗಳ ಜೊತೆಗೇ ರಣವೀರ್ ಬೆತ್ತಲೆ ಫೋಟೊಶೂಟ್, ಕೋವಿಡ್ ಕಾಲದ ತಟ್ಟೆ ಬಡಿತ, ಬರಿಗಾಲ ನಡಿಗೆ, ಜೆಸಿಬಿ ಆರ್ಭಟಗಳಂಥ ಸದ್ಯದ ವಿದ್ಯಮಾನಗಳಿಗೆ ಹರಿತವಾಗಿ ಸ್ಪಂದಿಸುವ ಪದ್ಯಗಳೂ ಇಲ್ಲಿವೆ. ಕಾವ್ಯವಲ್ಲದೆ ಬೇರೆ ಭಾಷೆಯಲ್ಲಿ – ಧ್ವನಿಯಲ್ಲಿ ಮಾತಾಡಲಾರೆ ಎಂದು ನಂಬಿರುವ 'ಪರ್ಮನೆಂಟ್ ಕಂಟೆಂಪರರಿ' ಕವಿಯ ಕಾವಿನ ಈ ಕಾವ್ಯಗುಚ್ಛ ನಮ್ಮನ್ನೂ ಒಮ್ಮೆ ಬೆಚ್ಚಗಾಗಿಸುತ್ತವೆ.

**ಲೇ: ಪ್ರತಿಭಾ ನಂದಕುಮಾರ್; ಬೆ: ₹ 80; ಪ್ರ: ಅಹರ್ನಿಶಿ ಪ್ರಕಾಶನ; ದೂ: 9449174662**

## ಚಿಗುರು ಚಿತ್ತಾರ



ಖ್ಯಾತ ವ್ಯಂಗ್ಯಚಿತ್ರಕಾರ ಕೆ.ಆರ್. ಸ್ವಾಮಿ ಅವರ ಬರಹಗಳ ಗುಚ್ಛವಿದು. 'ನೆನಪಿನ ಕಥನ–ವ್ಯಂಗ್ಯ ಕಂಗಳಿಂದ' ಎಂಬ ಅಡಿಶೀರ್ಷಿಕೆಯೇ ಈ ಪುಸ್ತಕದ ಹೂರಣವನ್ನೂ ಸೂಚಿಸುವಂತಿದೆ. ಇಲ್ಲಿ ಅಪರೂಪದ ಅಷ್ಟೇ ಸ್ವಾರಸ್ಯಕರವಾದ ನೆನಪುಗಳಿವೆ. ಜೊತೆಗೆ ಸ್ವಾಮಿ ಅವರ ಚುರುಕು ಗೆರೆಗಳ ಚಿತ್ರಗಳೂ ಇವೆ. ಇವರ ಬರಹಗಳಲ್ಲಿಯೂ ವ್ಯಂಗ್ಯಚಿತ್ರದ ಗುಣಗಳೇ ಎದ್ದು ಕಾಣುತ್ತವೆ. ನೆನಪಿನಂಗಳ, ಕೆಲ ತಮಾಷೆಯ ಪ್ರಸಂಗಗಳು ಮತ್ತು ನೆನಪು ಕಥೆಯಾಗಿ ಎಂಬ ಮೂರು ಭಾಗಗಳಲ್ಲಿ ವಿಂಗಡಣೆಗೊಂಡಿರುವ ಇಲ್ಲಿನ ಎಲ್ಲ ಬರಹಗಳಲ್ಲಿ ಕಾಣುವ, ಕಾಡುವ ಸಾಮಾನ್ಯ ಗುಣ ವ್ಯಂಗ್ಯ ಮತ್ತು ಚಿತ್ರಕಶಕ್ತಿ. ಕುರಿ ಹೊಡೆಯುವ ವಿಶಿಷ್ಟ ಆಚರಣೆಗಳಿಂದ ಹಿಡಿದು, ಸುಬ್ಬಣ್ಣ, ನಾಡಿಗರು, ಕಾರಂತರಂಥವರ ಒಡನಾಟದದ ನೆನಪುಗಳು, ಅವರ ಬದುಕಿನಲ್ಲಿ ಕಂಡ ವಿಶಿಷ್ಟ ವ್ಯಕ್ತಿತ್ವಗಳ ವ್ಯಕ್ತಿಚಿತ್ರಗಳು, ಕೊನೆಯ ಭಾಗದಲ್ಲಿನ ಎರಡು ಕಥೆಗಳು ಎಲ್ಲದರಲ್ಲಿಯೂ ವ್ಯಂಗ್ಯಚಿತ್ರಕಾರನಿಗೆ ಇರುವ ಸೂಕ್ಷ್ಮವಾದ ಗ್ರಹಿಕೆ ಮತ್ತದನ್ನು ತುಸು ವಕ್ರವಾಗಿ ಕಾಣಿಸುವ ಪ್ರತಿಭೆ ಎರಡೂ ಕಾಣಿಸುತ್ತದೆ. ಹಾಗಾಗಿಯೇ, ಲವಲವಿಕೆಯಿಂದಲೇ ಓದಿಸಿಕೊಳ್ಳುವ ಈ ಬರಹಗಳು ಒಂದು ಕಾಲದ ಸಾಂಸ್ಕೃತಿಕ ಚಹರೆಗಳನ್ನೂ ಹಿಡಿದಿಡುವ ದಾಖಲೆಯೂ ಆಗಿವೆ.

**ಲೇ: ಕೆ.ಆರ್. ಸ್ವಾಮಿ; ಬೆ: ₹ 295; ಪ್ರ: ಅಂಕಿತ ಪುಸ್ತಕ; ದೂ: 080 26617100**